## ಒಡನಾಟ

● ನಿಮ್ಮ ಮುಂದಿನ ಬರವಣಿಗೆ, ಕಾರ್ಯ, ಯೋಜನೆ ಕುರಿತು...

ಈಗ 'ಕಾಲು ದಾರಿಯ ಕಥನಗಳು' ಪ್ರಕಟವಾದ ನಂತರ, ಇದೀಗ ಒಂದು ಕಾದಂಬರಿ ಬರೆದು ಮುಗಿಸಿದ್ದೇನೆ. ಅದು ಮುಂದಿನ ವರ್ಷ ಪ್ರಕಟವಾಗಲಿದೆ. ಬರೆಯಬೇಕೆಂದಿರುವ ಇನ್ನೊಂದು ಕಾದಂಬರಿಯ ವಸ್ತು ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಇದೆ; ಬರೆಯಲು ಸಮಯವಾಗುತ್ತಿಲ್ಲ. ನಿವೃತ್ತಿಯಾದ ಮೇಲೆ ಪಾಠಮಾಡಬೇಕೆನ್ನುವ ಉತ್ಸಾಹದಿಂದ ಮೈಸೂರು ವಿಶ್ವವಿದ್ಯಾಲಯದ ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಈಗಲೂ ಸಂದರ್ಶಕ ಪ್ರಾಧ್ಯಾಪಕನಾಗಿ ವಾರಕ್ಕೆ ಎರಡು ಮೂರು ದಿನ ಹೋಗುತ್ತಿದ್ದೇನೆ. ಬರೆಯುವುದರಷ್ಟೇ ಪಾಠ ಮಾಡುವುದೂ ನನಗೆ ತುಂಬಾ ಇಷ್ಟ. ಆದರೂ ಅಂದುಕೊಂಡಂತೆ ಅರಣ್ಯಸೀಮೆಯ ಬುಡಕಟ್ಟು ಹುಡುಗನೊಬ್ಬ ವಿಶ್ವವಿದ್ಯಾಲಯ ಪ್ರವೇಶಿಸುವ ಮತ್ತು ಆತ ಅಲ್ಲಿಯ ವಿದ್ಯಮಾನಗಳಿಂದ ದಿಗ್ಭ್ರಮೆಗೊಳ್ಳುವ ಕಥನವುಳ್ಳ ಕಾದಂಬರಿಯೊಂದನ್ನು ಬರೆಯುವ ಉದ್ದೇಶ ಇದ್ದೇ ಇದೆ, ಬರೆಯುತ್ತೇನೆ. ಇಷ್ಟಲ್ಲದೆ ಮೈಸೂರಿನ ಅರಿವು ಕನ್ನಡ ಶಾಲೆಯ ಶೈಕ್ಷಣಿಕ ಟ್ರಸ್ಟ್ ಮತ್ತು ಕನ್ನಡಿ ಕ್ರಿಯೇಷನ್ಸ್‌ನ ಗೆಳೆಯರೆಲ್ಲ ಸೇರಿ ನಿರ್ಮಿಸಿದ ಮಾತಿನ ಮಹಾಕಾವ್ಯ 'ನೀಲಗಾರರ ಸಾಲು' ಅಥವಾ 'ಮಂಟೇಸ್ವಾಮಿ' ಸಾಕ್ಷ್ಯಚಿತ್ರವನ್ನು ಅಂತರ್ಜಾಲಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೆರವಿನಿಂದ ಮಾಡಿದ್ದೇವೆ. ಅದನ್ನು ಈ ಮೂರು ತಿಂಗಳಲ್ಲಿ ನಾಲ್ಕು ಸಾವಿರ ಜನ ನೋಡಿದ್ದಾರೆ. ಮತ್ತು ಧಾರವಾಡ ಸಾಹಿತ್ಯ ಸಂಭ್ರಮದಲ್ಲಿ ನಮ್ಮ ಭಾಗದ ಮೈಸೂರು ಗುರುರಾಜ್ ಹಾಗೂ ತಂಡದವರು ಹಾಡಿದ ಮಂಟೇಸ್ವಾಮಿ, ಮಹದೇಶ್ವರ, ನಂಜುಂಡನ ಜನಪದ ಹಾಡುಗಾರಿಕೆಗೆ ಸಿಕ್ಕ ಪ್ರತಿಕ್ರಿಯೆ ಆಶ್ಚರ್ಯ ಮತ್ತು ಸಂತೋಷ ತರುವಂಥದ್ದು. ಮಣಿಪಾಲ್ ಶೈಕ್ಷಣಿಕ ಸಂಸ್ಥೆಯ ಕಲಾನಿಕಾಯದವರು ಇದೇ ಜನಪದ ಕಲಾವಿದರು ಹಾಡಿದ ಕಥನ ಭಾಗಗಳನ್ನು ದೃಶ್ಯ, ಶ್ರವ್ಯದ ಮೂಲಕ ಅಂತರ್ಜಾಲಕ್ಕೆ ಹಾಕಿದ್ದನ್ನು ಪ್ರಪಂಚದಾದ್ಯಂತ ಸುಮಾರು 22 ಸಾವಿರಕ್ಕೂ ಮಿಕ್ಕು ಜನ ನೋಡಿದ್ದಾರೆ, ಕೇಳಿದ್ದಾರೆ. ಅನೇಕ ಸಮಾರಂಭ ಮತ್ತು ಕಾರ್ಯಾಗಾರಗಳಲ್ಲೂ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಕಳೆದ ವರ್ಷ ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದ ಅಭ್ಯರ್ಥಿಗಳು ಮತ್ತು ವಿದ್ವಾಂಸರೂ ಈ ಜನಪದ ಹಾಡುಗಾರಿಕೆಯನ್ನು ಅಂತರಂಗಪೂರ್ವಕವಾಗಿ ಕೇಳಿ ಮೆಚ್ಚಿದರು. ಇತ್ತೀಚೆಗೆ ಇತಿಹಾಸ ಪ್ರಾಧ್ಯಾಪಕ ಮಿತ್ರರಾದ ಪ್ರಥ್ವಿದತ್ತ ಚಂದ್ರಶೋಭಿಯವರ ಪರಿಚಯದ ಮೂಲಕ ಬಂದಿದ್ದ ಪಾಕಿಸ್ತಾನದ ಇಂಗ್ಲಿಷ್ ಪ್ರಾಧ್ಯಾಪಕಿ ನೂಶೀನ್ ಆಲಿ ಅವರು ಗುರುರಾಜ್ ತಂಡದವರ ಮಹದೇಶ್ವರ, ಮಂಟೇಸ್ವಾಮಿ ಕಥನಗಳನ್ನು ಶ್ರವ್ಯ ಮತ್ತು ದೃಶ್ಯಮಾಧ್ಯಮಕ್ಕೆ ಅಳವಡಿಸಿ 'ಅರೆ ಇದು ಎಷ್ಟು ಚಂದವಿದೆ' ಎಂದು ತಮ್ಮ ಪ್ರದೇಶದ ಎಲ್ಲರಿಗೂ ಕೇಳಿಸುತ್ತೇನೆಂದು ಕೊಂಡುಹೋದರು. ಇಂತಹ ಅನೇಕ ಸಂಗತಿಗಳು ನನ್ನನ್ನು ಕ್ರಿಯಾಶೀಲವಾಗಿ ಇರಿಸಿವೆ.

### ಜಿ.ಕೆ. ರವೀಂದ್ರಕುಮಾರ್

ಕವಿ, ವಿಮರ್ಶಕ ರವೀಂದ್ರಕುಮಾರ್ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯವರು. 'ಸಿಕಾಡ', 'ಪ್ಯಾಂಜಿಯಾ', 'ಕದವಿಲ್ಲದ ಊರಿನಲ್ಲಿ', 'ಒಂದು ನೂಲಿನ ಜಾಡು', 'ಮರವನ್ನಪ್ಪಿದ ಬಳ್ಳಿ' ಅವರ ಕವನಸಂಗ್ರಹಗಳು. ಭದ್ರಾವತಿ ಆಕಾಶವಾಣಿ ಕೇಂದ್ರದ ಸಹಾಯಕ ಕಾರ್ಯಕ್ರಮ ನಿರ್ದೇಶಕರಾಗಿರುವ ಅವರು, 'ಸುಪ್ತಸ್ವರ', 'ಪುನರ್ಭವ' ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.